ಶ್ರೀ ವೀರಣ್ಣ.—ಸರ್ಕಾರಕ್ಕೆ ರಿಪೋರ್ಟ್ ಬಂದಿದೆ, ಅದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಸರ್ಕಾರ ಮಾಡುತ್ತಿದೆ. ಎಲ್ಲಾ ಅಂಶಗಳನ್ನು ಒಪ್ಪಿಕೊಳ್ಳಬೇಕೆ ? ಅಥವಾ ಬೇಡವೆ ? ಕೆಲವೇ ಅಂಶಗಳನ್ನು ಒಪ್ಪಿಕೊಳ್ಳಬೇಕೆ ? ಎನ್ನುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಾಗ ಮಾನ್ಯ ಸದಸ್ಯರಿಗೂ ಗೊತ್ತಾಗುತ್ತದೆ. ಅದು ಕರ್ನಾಟಕ ರಾಜ್ಯದ ಜನತೆಗೂ ಕೂಡ ಗೊತ್ತಾಗುತ್ತದೆ. ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ.

೪. ತುಮಕೂರು ತಾಲ್ಲೂಕು ನಾಗವಲ್ಲಿಯಲ್ಲಿ ಶ್ರೀಮತಿ ಗಿರಿಜ ಅವರ ಸಂಶಯಾಸ್ಪದ ಮರಣದ ಬಗ್ಗೆ

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಅಧ್ಯಕ್ಷರೆ, ತುಮಕೂರು ತಾಲ್ಲೂಕು ನಾಗವಲ್ಲಿಯ ಶ್ರೀ ಎನ್. ಡಿ. ಪಾಲಾಕ್ಷಯ್ಯನವರ ಮಗ ಕುಣಿಗಲ್ ಸಿದ್ಧಾರ್ಥ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿರುವ ಶ್ರೀ ಎನ್. ಪಿ. ಜಗದೀಶ್ ಅವರೊಡನೆ ದಿನಾಂಕ ೧೨-೫-೧೯೮೮ರಂದು ಶ್ರೀಮತಿ ಗಿರಿಜಮ್ಮನ ವಿವಾಹವಾಗಿತ್ತು. ನಂತರ ೧೭-೫-೧೯೮೮ರಂದೇ ನಾಗವಲ್ಲಿಯ ತನ್ನ ಪತಿಯ ಮನೆಯಲ್ಲಿ ಸಂಶಯಾಸ್ಪದ ರೀತಿಯಲ್ಲಿ ಸಾವಿಗೀಡಾದ ಪದವೀಧರೆ ಶ್ರೀಮತಿ ಗಿರಿಜ ಅವರ ಸಾವಿನ ಬಗ್ಗೆ ಗಿರಿಜಳ ಅಣ್ಣ ತುಮಕೂರು ಜಿಲ್ಲಾ ಪೋಲೀಸರು ಸೂಪರಿಂಟೆಂಡೆಂಟ್‌ರವರಿಗೇ ದೂರು ಕೊಟ್ಟಾಗ್ಯೂ ಸದರಿ ದೂರಿನ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಳ್ಳದೆ ಪೋಲೀಸರು ಶವಪರೀಕ್ಷೆಗೆ ಮುನ್ನ ಬಂಧುಗಳಿಗೆ ಮೃತ ಗಿರಿಜಳ ಮುಖವನ್ನೂ ತೋರಿಸದೆ ಮೃತಳ ಬಂಧುಗಳನ್ನು ಬೆದರಿಸಿ ಕಳುಹಿಸಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ (ಮುಖ್ಯ ಮಂತ್ರಿಗಳ ಪರವಾಗಿ).—ಅಧ್ಯಕ್ಷರೆ, ನಾಗವಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾ ಶ್ರೀ ಜಗದೀಶ್ ಎಂಬುವರ ಪತ್ನಿ ವಿಷ ಸೇವಿಸಿದ್ದಾರೆಂದು ಹೇಳಲಾದ ಶ್ರೀಮತಿ ಗಿರಿಜಮ್ಮ (೨೬ ವರ್ಷ) ರವರನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊರ ರೋಗಿಯಾಗಿ ಸೇರಿಸಿಕೊಳ್ಳಲಾಯಿತೆಂದೂ, ಸೇರಿಸಿಕೊಳ್ಳುವಾಗಲೇ ಆಕೆಯ ಸ್ಥಿತಿ ಚಿಂತಾಜನಕವಾಗಿತ್ತೆಂದೂ, ಆದರೂ ಆಕೆಗೆ ಚಿಕಿತ್ಸೆ ನೀಡಲಾಗಿ ಗುಣಮುಖರಾಗದೆ ರಾತ್ರಿ ೭.೧೫ರ ಸಮಯದಲ್ಲಿ ಮೃತಳಾದಳೆಂದು ದಿನಾಂಕ ೧೭-೫-೧೯೮೮ರ ರಾತ್ರಿ ೯-೪೫ ಘಂಟೆಯಲ್ಲಿ ತುಮಕೂರು ತಾಲ್ಲೂಕಿನ ಹೆಬ್ಬೂರು ಪೋಲೀಸ್ ಠಾಣೆಗೆ ವರದಿಯನ್ನು ಕೊಟ್ಟರು ಇದನ್ನು ಅಸ್ವಾಭಾವಿಕ ಮರಣದ ಪ್ರಕರಣವೆಂದು ದಾಖಲು ಮಾಡಿಕೊಂಡು ವಿಚಾರಣೆ ಮಾಡಲಾಯಿತು.

೨. ಪೋಲೀಸರ ಕೋರಿಕೆ ಮೇರೆಗೆ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರು ದಿನಾಂಕ ೧೮-೫-೧೯೮೮ರ ಮಧ್ಯಾಹ್ನ ೩.೪೫ ಘಂಟೆಯಿಂದ ಸಂಜೆ ೭ ೪೫ ಘಂಟೆಯವರೆಗೆ ಶವದ ಮಹಜರ್ ನಡೆಸಿದರು. ಮಹಜರಿನ ವೇಳೆಯಲ್ಲಿ ಮೃತಳ ಅಣ್ಣ ಶ್ರೀ ಜೆ. ಎಸ್. ಬಸವರಾಜ್, ತಾಯಿ ಶ್ರೀಮತಿ ರೇವಮ್ಮ ತಂದೆ ಶ್ರೀ ಸಿದ್ದಣ್ಣ ಇವರಂಗಳನ್ನು ವಿಚಾರಿಸಲಾಯಿತು. ಶ್ರೀಮತಿ ರೇವಮ್ಮನವರು ತಮ್ಮ ಹೇಳಿಕೆಯಲ್ಲಿ ಮೃತಳು ಆತ್ಮಹತ್ಯೆ ಮಾಡಿಕೊಂಡಿರಲಾರಳು ಎಂದು ತಿಳಿಸಿದ್ದಾರೆ. ಮೃತಳ ತಂದೆ ಸಾವಿಗೆ ಕಾರಣವೇನೆಂದು ಗೊತ್ತಿಲ್ಲವೆಂದು ಹೇಳಿಕೆ ಕೊಟ್ಟರು ಮೃತಳ ಅಣ್ಣ ಏನನ್ನೂ ಹೇಳಿಲ್ಲ. ಈ ಪ್ರಕರಣದಲ್ಲಿ ವರದಕ್ಷಿಣೆಯ ಬಗ್ಗೆ ಕಿರುಕುಳ ಅಥವಾ ಇತರೆ ಕಿರುಕುಳದ ಬಗ್ಗೆ ಯಾವ ದೂರುಗಳೂ ಬಂದಿರುವುದಿಲ್ಲ.

೩. ಗಿರಿಜಮ್ಮನ ದೇಹದ ಮರಣೋತ್ತರ ಪರೀಕ್ಷೆಯನ್ನು ತುಮಕೂರು ಸರ್ಕಾರಿ ಆಸ್ಪತ್ರೆಯ ಇಬ್ಬರು ವೈದ್ಯರಿಂದ ನಡೆಸಿದರು. ಮರಣೋತ್ತರ ಪರೀಕ್ಷಾ ವರದಿ ಮತ್ತು ಮಹಜರ್‌ಗಳಿಂದ ಆಕೆಯ ದೇಹದ ಮೇಲೆ ಯಾವ ತರಹದ ಗಾಯಗಳಾಗಿರುವುದು ಕಂಡು ಬಂದಿಲ್ಲ. ಮರಣಕ್ಕೆ ಕಾರಣ ತಿಳಿಯಲು ರಾಸಾಯನಿಕ ತಜ್ಞರ ವರದಿ ಬರಬೇಕಾಗಿದೆ

೪. ತುರುವೇಕೆರೆಯ ಸಿದ್ದಪ್ಪನವರ ಮಗಳಾದ ಶ್ರೀಮತಿ ಗಿರಿಜಮ್ಮ ಪದವೀಧರೆಯಾಗಿದ್ದು, ಆಕೆಗೆ ಕುಣಿಗಲ್‌ನ ಸಿದ್ಧಾರ್ಥ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿರುವ ಜಗದೀಶ್‌ರವರೊಡನೆ ದಿನಾಂಕ ೧೨-೫-೧೯೮೮ರಂದು ಮದುವೆಯಾಗಿತ್ತು. ದಿನಾಂಕ ೧೩-೫-೧೯೮೮ರಂದು ಆರತಕ್ಷತೆ ಇತ್ತು.

ದಿನಾಂಕ ೧೪-೫-೧೯೮೮ರಂದು ನಾಗವಲ್ಲಿಯಲ್ಲಿರುವ ತನ್ನ ಗಂಡನ ಮನೆಗೆ ಬಂದಿದ್ದಳು. ನವ ವಧುವಿನೊಡನೆ ನಾಗವಲ್ಲಿಗೆ ಬಂದಿದ್ದ ಅವಳ ತಾಯಿ ಮತ್ತು ಸಹೋದರ ೧೬-೫-೧೯೮೮ರಂದು ಹೊಲದ ಕಡೆಗೆ ಹೋಗಿದ್ದರು ಮತ್ತು ಮನೆಯ ಇನ್ನಿತರರು ಸಂಬಂಧೀಕರ ಮನೆಯಲ್ಲಿದ್ದ ' ತಿಥಿ ' ಕಾರ್ಯಕ್ಕೆ ಹೋಗಿದ್ದರು. ಜಗದೀಶ್ ಮತ್ತು ಮೃತ ಗಿರಿಜ ಮಾತ್ರ ಮನೆಯಲ್ಲಿದ್ದರು. ಜಗದೀಶ್‌ರವರು ಶವಪೂಜೆ ಮಾಡಲು ವ್ಯವಸ್ಥೆ ಮಾಡಿದೆಂದು ತನ್ನ ಹೆಂಡತಿಗೆ ಹೇಳಿ ಕೈಕಾಲು ತೊಳೆದುಕೊಂಡು ಬರುವಲ್ಲಿ ಶ್ರೀಮತಿ ಗಿರಿಜರವರು ತಮ್ಮ ರೂಮಿನಲ್ಲಿ ಒಳಗಿಂದ ಬಾಗಿಲು ಹಾಕಿ ಕೊಂಡಿದ್ದಳೆಂದೂ, ಎಷ್ಟೇ ಕೂಗಿದರೂ ಬಾಗಿಲು ತೆಗೆಯದ್ದರಿಂದ ಪಕ್ಕದವರೂ ಬಂದು ಬಾಗಿಲು ಹೊಡೆಯುವ ಪ್ರಯತ್ನದಲ್ಲಿದ್ದಾಗ ಬಾಗಿಲನ್ನೂ ಗಿರಿಜ ತೆಗೆದಳೆಂದೂ, ಆವಳಿಂದ ವಿಷದ ವಾಸನೆ ಬರುತ್ತಿತ್ತೆಂದೂ ಸಾಕ್ಷಿಗಳ ಹೇಳಿಕೆಯಿಂದ ತಿಳಿದು ಬಂದಿದೆ. ಶ್ರೀಮತಿ ಗಿರಜಮ್ಮನಿಗೆ ಸ್ಥಳದಲ್ಲಿ ನೆರೆದವರು ಉಪ್ಪು ನೀರು ಕುಡಿಸಿ ಪ್ರಥಮ ಚಿಕಿತ್ಸೆ ಕೊಡಲು ಪ್ರಯತ್ನಿಸಿದಾಗ ಮತ್ತು ಸ್ಥಳದ ಪೊಸಗಿ ವೈದ್ಯರು ಚಿಕಿತ್ಸೆ ಮಾಡಲು ಪ್ರಯತ್ನಿಸಿದಾಗ ಆಕೆ ಪ್ರತಿಭಟಿಸಿದಳೆಂದೂ ತಿಳಿದುಬಂದಿದೆ. ತದನಂತರ ಅವಳನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿ ಸರ್ಕಾರಿ ಆಸ್ಪತ್ರೆಯ ವೈದ್ಯರ ಪ್ರಮಾಣ ಪತ್ರದ ಪ್ರಕಾರ ಅವಳ ಬಾಯಿಂದ ಬುರುಗು ಬರುತ್ತಿತ್ತೆಂದೂ, ಅವಳ ಉಸಿರಾಟ ಮಂತ್ತು ನಾಡಿ ಮಿಡಿತ ಬಹಳ ಕ್ಷೀಣಿಸಿದ್ದವೆಂದೂ ಸಂಜೆ ೭-೧೫ಕ್ಕೆ ಕೊನೆಯುಸಿರನ್ನೆಳೆದಳೆಂದೂ ತಿಳಿದು ಬಂದಿದೆ.

೫. ದಿನಾಂಕ ೭-೬-೧೯೮೮ರಂದು ತುರುವೇಕೆರೆಯ ವಿಧಾನಸಭಾ ಸದಸ್ಯರಾದ ಶ್ರೀ ಕೆ. ಹೆಚ್. ರಾಮಕೃಷ್ಣಯ್ಯನವರು ಈ ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರಿಂದ, ತುಮಕೂರು ಡಿ.ಎಸ್.ಪಿ. ರವರಿಗೆ ಈ ಪ್ರಕರಣದ ತನಿಖೆ ನಡೆಸಲು ಪಹಿಸಲಾಯಿತು. ಅವರು ೮-೬-೧೯೮೮ ರಿಂದ ತನಿಖೆ ನಡೆಸುತ್ತಿದ್ದಾರೆ. ಪ್ರಕರಣ ನಡೆದ ನಂತರ ಇಲ್ಲಿಯವರೆವಿಗೂ ಒಂದು ಅನಾಮಧೇಯ ಅರ್ಜಿ ಬಿಟ್ಟು ಯಾವುದೇ ಅರ್ಜಿ ಮೃತಳ ತಂದೆ ತಾಯಿಗಳ ಕಡೆಯಿಂದಾಗಲಿ ಅಥವಾ ಇತರರಿಂದಾಗಲಿ ತುಮಕೂರಿನ ಎಸ್.ಪಿ.ರವರಿಗೆ ಬಂದಿರುವುದಿಲ್ಲ. ಸದರಿ ಮೂಗರ್ಜಿಯಲ್ಲಿರುವ ವಿಷಯದ ಬಗ್ಗೆಯೂ ತನಿಖೆಯ ವೇಳೆಯಲ್ಲಿ ಸೂಕ್ತ ಗಮನ ಕೊಡಲಾಗಿದೆ.

೬. ಮೃತಳ ತಂದೆ ತಾಯಿ ಮತ್ತು ಸೋದರರು, ಅಂತ್ಯ ಕ್ರಿಯೆಯ ಕಾಲದಲ್ಲಿ ಹಾಜರಿದ್ದರು. ಈ ಪ್ರಕರಣದ ಬಗ್ಗೆ ಕಾನೂನಿನಂತೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಸೂಚನೆಯಲ್ಲಿರುವ ಆಪಾದನೆಗಳು ಸತ್ಯಕ್ಕೆ ದೂರವಾದ್ದವೆಂದು ತಿಳಿದು ಬಂದಿದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಉಪಾಧ್ಯಕ್ಷರೆ, ವರದಕ್ಷಿಣೆಯ ಆಸೆಗಾಗಿ ಹೆಣ್ಣಿನ ಕೊಲೆಗಳು ರಾಜ್ಯದಲ್ಲಿ ಬಹಳವಾಗಿ ನಡೆಯುತ್ತಿವೆ. ಬಹುಶಃ ಇದಕ್ಕೆ ಪೋಲೀಸ್ ಇಲಾಖೆ ಮತ್ತು ಆರೋಗ್ಯ ಇಲಾಖೆಗಳು ಎರಡೂ ಸಹ ಕುಮ್ಮಕ್ಕು ಕೊಡುತ್ತಿವೆ ಎನ್ನುವಷ್ಟಕ್ಕೆ ರೀತಿಯಲ್ಲಿ ಮಾನ್ಯ ಸಚಿವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದರಲ್ಲಿದೆ. ಕೋರ ಮಂಡಲ ಪಿ. ಎಸ್. ಸಿದ್ದಲಿಂಗಯ್ಯನವರ ಳನೇ ಪುತ್ರಿ ಈಕೆ ಬಿ ಎ ಪದವೀಧರೆ. ೧೨ನೇ ತಾರೀಖು ಈಕೆಗೆ ಲಗ್ನವಾಗಿದೆ. ೧೩ನೇ ತಾರೀಖು ಗಂಡನ ಮನೆಗೆ ಈಕೆಯನ್ನು ಕಳುಹಿಸಿದ್ದಾರೆ. ೧೩ನೇ ತಾರೀಖು ಹೋದರೆ ೧೭ನೇ ತಾರೀಖು ಅಲ್ಲಿ ಆಕೆಯ ಸಾವು ಆಯಿತು. ೧೮ನೇ ತಾರೀಖು ಬೆಳಿಗ್ಗೆ ೧೦ ಗಂಟೆಗೆ ಟೆಲಿಗ್ರಾಂ ಹೋಗಿದೆ. ಈಕೆಯ ತಂದೆ ತಾಯಿಗಳು ೧೩ನೇ ತಾರೀಖಿನಿಂದ ೧೫ನೇ ತಾರೀಖಿನವರೆಗೂ ಅಲ್ಲೆ ಇದ್ದರು. ಇವರು ಊರಿಗೆ ಹೋದಮೇಲೆ ಇಲ್ಲಿ ನಡೆದಿರತಕ್ಕದ್ದು ವಿಷವನ್ನು ತೆಗೆದುಕೊಂಡು ಈಕೆ ಸೂಯಿಸೈಡ್ ಮಾಡಿ ಕೊಂಡಿದ್ದಾಳೆ ಎನ್ನುವಷ್ಟಕ್ಕೆ ರೀತಿಯಲ್ಲಿ ಇವರ ಸ್ಟೇಟ್‌ಮೆಂಟ್ ಇದೆ. ಆದರೆ ಆಕೆ ೧೩ನೇ ತಾರೀಖು ಅಲ್ಲಿಗೆ (ಗಂಡನ ಮನೆಗೆ) ಹೋಗಿರತಕ್ಕದ್ದು. ಅಲ್ಲಿ ಮನೆಯ ಹೊಸ ಪರಿಚಯ, ಅಂದಮೇಲೆ ಆಕೆ ಸೂಯಿಸೈಡ್ ಮಾಡಿಕೊಳ್ಳಬೇಕಾದರೆ ವಿಷವನ್ನು ತರುವುದಕ್ಕೆ ಎಲ್ಲಿಗೆ ಹೊಗಿದ್ದಳು ? ಒಂದುವೇಳೆ ಮನೆಯಲ್ಲಿ ಯಾರಾದರೂ ವಿಷವನ್ನು ಮೊದಲೇ ತಂದಿಟ್ಟಿದ್ದರೆ ? ಎಂದರೆ ಇಂಥ ಕಡೆಯೇ ವಿಷ ಇದೆಯೆಂದು ಅವಳು ತಿಳಿದುಕೊಂಡ ಬಗೆ ಹೇಗೆ ? ಈಕೆಯ ತಂದೆತಾಯಿಗಳು ೩೫ ಸಾವಿರ ರೂಪಾಯಿ ವರದಕ್ಷಿಣೆಯನ್ನು ಕೊಟ್ಟಿದ್ದಾರೆ, ಸಂಬಾರು ೪೦ ಸಾವಿರ ರೂಪಾಯಿಯ ಬಂಗಾರವನ್ನು ಅವಳಿಗೆ ಹಾಕಿದ್ದಾರೆ, ಸುಮಾರು ೧ ಲಕ್ಷ ರೂಪಾಯಿ ಖರ್ಚುಮಾಡಿ ಮದುವೆಯನ್ನೂ ಮಾಡಿದ್ದಾರೆ. ಹೀಗಿರುವಾಗ ಆ ಹೆಣ್ಣುಜೀವಗಳಿಗೆ ಇವನ ಮೇಲೆ ಒಪ್ಪಿಗೆ ಇಲ್ಲದಿದ್ದರೆ ಅಥವಾ ಮದುವೆಯಾದ ೩ ದಿನಗಳಲ್ಲೇ ನಾನು ಸಾಯಂತ್ತೇನೆಂದು ಅವಳಿಗೆ ಗೊತ್ತಿದ್ದಿದ್ದರೆ ಆಕೆ ಈ ಮದುವೆಯನ್ನೇ ಆಗುತ್ತಿರಲಿಲ್ಲ. ಇದು ಸಂಶಯಾಸ್ಪದ. ಈಕೆಯ ಗಂಡ ಜಗದೀಶ್ ಎನ್ನುವವನು ಕುಣಿಗಲ್‌ನಲ್ಲೇ

ಬೇರೆ ಒಂದು ಹೆಣ್ಣಿನ ಜೊತೆ ಮದುವೆ ಆಗಬೇಕೆಂದು ಮೊದಲೇ ನಿಶ್ಚಯ ಮಾಡಿಕೊಂಡಿದ್ದ. ಆ ಹೆಣ್ಣನ್ನೇ ಮದುವೆ ಆಗಬೇಕೆಂದು ಅವನಿಗೆ ಮನಸ್ಸಿತ್ತು. ಇದಕ್ಕಾಗಿ ಅವನು ತನ್ನ ಳಿಜನ ತಂಗಿಯರ ಸಹಾಯವನ್ನು ಪಡೆದು ಕೊಠಡಿಯಲ್ಲಿ ಒಂಟಿಯಾಗಿ ಮಲಗಿದ್ದ ಈ ಹೆಣ್ಣುಮಗಳ ಕುತ್ತಿಗೆಯನ್ನು ಹಿಸುಕಿ ಸಾಯಿಸಿದ್ದಾನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಅವಳು, ಇವಳು ಎಂದು ಹೇಳುವುದಕ್ಕೆ ಬದಲು ಹೆಣ್ಣುಮಗಳು ಎಂದು ಹೇಳುವುದಕ್ಕೆ ಅವರಿಗೆ ಹೇಳಿ. ಈ ಭಾಷೆಯನ್ನು ಅವರು ಉಪಯೋಗಿಸುವುದು ಬೇಡ.

ಶ್ರೀ ಬಿ, ಲಕ್ಕಪ್ಪ.—ಈ ಸಮಾಜ ಎಷ್ಟರಮಟ್ಟಿಗೆ ಹೆಣ್ಣಿಗೆ ಮರ್ಯಾದೆಯನ್ನು ತೋರಿಸುತ್ತಿದೆ ಎಂಬುದನ್ನು ಇಲ್ಲಿ ಕೇವಲ ಅನುಕಂಪ ತೋರಿಸಿದರೆ ಸಾಲದು. ನಾನು ಏತಕ್ಕೆಹೇಳಬೇಕಾಗಿದ್ದೇನೆ ಎಂದರೆ ತಿಪಟೂರಿನಲ್ಲಿ ಇದೇರೀತಿ ಕೊಲೆ ಆದಾಗ ಅವರ ಮೇಲೆ ಥರ್ಡ್ ಡಿಗ್ರೀ ಹಾಕುವುದಕ್ಕೆ ಮುಂಚಿತವಾಗಿಯೇ ಒಬ್ಬ ಎಂ.ಬಿ.ಬಿ.ಎಸ್. ಡಾಕ್ಟರನ್ನು ಮದುವೆ ಆಗಿದ್ದಾರೆ. ನಾನು ಯಾರ ಬಗ್ಗೆಯೂ ಕೆಟ್ಟ ಅಭಿಪ್ರಾಯದಿಂದ ಹೇಳುತ್ತಿಲ್ಲ. ಇದನ್ನು ತರುವುದರಲ್ಲಿ ಬಹಳ ಉದ್ದೇಶವಿದೆ. ನಾನು ಆಕೆಯ ಗಾರವಕ್ಕೆ ಚ್ಯುತಿ ತರತಕ್ಕ ರೀತಿಯಲ್ಲಿ ವಿಕವಚನವನ್ನು ಉಪಯೋಗಿಸುತ್ತಿದ್ದೇನೆಂದು ಹೇಳುವುದು ಬೇಡ.

ಮಾನ್ಯ ಅಧ್ಯಕ್ಷರೆ, ಆಕೆಯ ಅಂದರೆ ಆ ಹೆಣ್ಣುಮಗಳ ತಾಯಿ ತಂದೆಯರು ನಾಗವಲ್ಲಿಗೆ ಬಂದು ಹೆಣವನ್ನು ನೋಡಬೇಕೆಂದಾಗ ಅಲ್ಲಿ ಹೆಣ ಇರಲಿಲ್ಲ. ನಂತರ ತುಮಕೂರಿಗೆ ಬಂದಂ ಪ್ರಾರಂಭದಲ್ಲೇ ತಮ್ಮ ಮಗಳ ಮುಖವನ್ನು ನೋಡುವುದಕ್ಕೆ ಪ್ರಯತ್ನ ಪಟ್ಟಾಗಲೂ ಕೂಡ ಪೋಲೀಸರು ಅವಕಾಶವನ್ನು ಕೊಟ್ಟಿಲ್ಲ. ಕೊನೆಗೆ ಆಕೆಯ ಶವದ ಪೋಸ್ಟ್‌ಮಾರ್ಟಂ ಎಲ್ಲಾ ಮುಗಿದಮೇಲೆ ಇವರು ಪ್ರತಿ ಭಟನೆಯನ್ನು ಮಾಡಿದಮೇಲೆ ಆ ಶವವನ್ನು ಇವರಿಗೆ ಕೊಟ್ಟಿದ್ದಾರೆ ಆದರೆ ಈ ಬಗ್ಗೆ ಯಾರೂ ಕಂಪ್ಲೇಂಟ್‌ನ್ನೇ ಕೊಟ್ಟಿಲ್ಲವೆಂದು ಮಾನ್ಯ ಸಚಿವರ ಉತ್ತರದಲ್ಲಿದೆ. ಸ್ವಾಮಿ, ನನ್ನ ಹತ್ತಿರ ಆ ಕಂಪ್ಲೇಂಟಿನ ಪ್ರತಿ ಇದೆ ಆ ಹೆಣ್ಣುಮಗಳ ಅಣ್ಣ ಬಸವರಾಜು ಎನ್ನುವವರು ತುಮಕೂರಿನ ಎಸ್.ಪಿ.ಗೆ ತಾ. ೨೫-೫-೮೮ರಂದು ಕಂಪ್ಲೇಂಟ್ ಕೊಟ್ಟಿದ್ದಾರೆ ಇದರ ಮೇಲೆ ಅವರು ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಆ ಹೆಣ್ಣುಮಗಳ ಗಂಡನಾದ ಜಗದೀಶ್ ಯಾರಿದ್ದಾನೆ ಅವನು ತನ್ನ ಹೆಂಡತಿಯನ್ನು ಏನು ಕೊಲೆ ಮಾಡಿದ್ದಾನೆ ಅವರು ಇವತ್ತೂ ಕೂಡ ಮಾಮೂಲಿ ಸ್ಥಿತಿಯಲ್ಲೇ ಇದ್ದಾನೆ. ಅವನನ್ನು ಅರೆಸ್ಟ್ ಮಾಡತಕ್ಕ ಕೆಲಸವನ್ನು ಈ ಪೋಲೀಸರು ಮಾಡಿಲ್ಲ. ಉದ್ದೇಶಪೂರ್ವಕವಾಗಿ ಕೊಲೆಯನ್ನು ಮಾಡಿರತಕ್ಕ ಅವನಮೇಲೆ ಇವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಪೋಲೀಸರು ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡಿಲ್ಲ ಅಪರಾಧಿಯನ್ನು ಇದುವರೆಗೂ ಅರೆಸ್ಟ್ ಮಾಡಿ ಅವನನ್ನು ಕಸ್ಟಡಿಯಲ್ಲಿಟ್ಟುಕೊಂಡಿಲ್ಲ ಅವನ ಮೇಲೆ ಯಾವುದೇ ಕ್ರಮವನ್ನೂ ಇದುವರೆಗೂ ತೆಗೆದುಕೊಂಡಿಲ್ಲ. ಆದುದರಿಂದ ಪೋಲೀಸ್‌ನವರು ಕೊಲೆ ಮಾಡಿರತಕ್ಕಂಥ ವ್ಯಕ್ತಿಯ ಅಮಿಷಕ್ಕೆ ಒಳಗಾಗಿ ಈ ರೀತಿ ಅವನನ್ನು ಅರೆಸ್ಟ್ ಮಾಡದೆ ಬಿಟ್ಟಿರುವುದರಿಂದ ಬಹುಶಃ ಏನಾಗುತ್ತದೆಂದರೆ ಸುತ್ತ ಮುತ್ತಲಿರತಕ್ಕಂಥ ಅನೇಕ ಜನರು ಇದನ್ನು ಕಂಡಿರುವವರು ತಮ್ಮ ಪತ್ನಿಯರನ್ನೂ ಕೂಡ ಈ ರೀತಿಯಾದ ಹಿಂಸೆಗೆ ಒಳಪಡಿಸಿ ಹಣವನ್ನು ತೆಗೆದುಕೊಳ್ಳಲು ಅವಕಾಶವಾಗುತ್ತದೆ. ಇವರ ಉದ್ದೇಶವೆಂದರೆ ಹಣ ಒಡವೆಗಳಿಗೋಸ್ಕರವಾಗಿಯೇ ಮದುವೆ ಮಾಡಿಕೊಂಡಿದ್ದಾರೆ. ಕೊನೆಗೆ ಎರಡನೇ ಮದುವೆ ಮಾಡಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ. ಮತ್ತೆ ಪೋಲೀಸ್‌ನವರೂ ಕೂಡ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿಲ್ಲ ಆದ್ದರಿಂದ ತಕ್ಷಣ ಪೋಲೀಸಿನವರ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಆದೇಶವನ್ನು ಕೊಡಬೇಕು. ಮತ್ತು ಇದರ ಬಗ್ಗೆ ಸ್ಥಳೀಯ ಪೋಲೀಸ್‌ನವರಿಂದ ತನಿಖೆ ಮಾಡಿಸುವುದು ಪ್ರಯೋಜನವಾಗುವುದಿಲ್ಲ ಸಿ.ಓ.ಡಿ ತನಿಖೆಯೇ ಮಾಡಿಸಬೇಕಾದ ಅಗತ್ಯವಿದೆ. ಹೊಸದಾಗಿ ಮದುವೆಯಾದ ಹೆಣ್ಣುಮಗಳು ಕಷ್ಟ ನೋಡಿಲ್ಲ, ಸುಖವನ್ನೂ ನೋಡಿಲ್ಲ. ಗಂಡನ ಜೊತೆಯಲ್ಲಿ ಬಾಳಬೇಕು ಎನ್ನುವ ಹೆಣ್ಣುಮಗಳು ನಾಲ್ಕುದಿವಸ ಯಾವುದೇ ಸುಖವಿಲ್ಲದೆ ಸಾಯಬೇಕಾದರೆ ಇದು ಆತ್ಮಹತ್ಯೆಯಲ್ಲ, ಇದು ಸಂಶಯಾಸ್ಪದವಾದ ಸಾವಾಗಿದೆ. ಆದ್ದರಿಂದ ಇದನ್ನು ಸಿ.ಓ.ಡಿಗೆ ಒಪ್ಪಿಸಿ ತನಿಖೆ ಮಾಡಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಗೋಪಾಲ ಮಂಕಂದ ಕಾನಡೆ.—ಮಾನ್ಯ ಅಧ್ಯಕ್ಷರೆ ೧೨-೫-೮೮ ರಂದು ಮದುವೆಯಾದರೆ ೧೭ನೇ ತಾರೀಖಿನಂದಂ ಹೆಣವಾಗಿರುತ್ತಾರೆ ಈ ರೀತಿ ಮದುವೆಯಾದ ತಕ್ಷಣ ಮರ್ಡರ್ ಆದ ತಕ್ಷಣ

ಕರ್ನಾಟಕದ ಯಾವುದೇ ಊರಲ್ಲಿ ಆಗಿರಲಿ ನಮ್ಮ ಪೋಲೀಸ್ ಅಧಿಕಾರಿಗಳು ಸರಿಯಾದ ತನಿಖೆಯನ್ನು ಮಾಡುವುದಿಲ್ಲ ಪೋಲೀಸ್‌ನವರು ಎಲ್ಲಿ ಕೈಹಾಕಂತ್ತಾರೆ ಅಲ್ಲಿ ತಕ್ಷಣವೇ ಆಕ್ಷನ್ ತೆಗೆದುಕೊಳ್ಳುವುದಿಲ್ಲ. ಅವರಿಗೆ ಅದು ಮೂವಂಬಲು, ಆವರಿಗೆ ದುಡ್ಡು ಸಿಗುತ್ತದೆ ನಂತರ ಚಾಲುಮಾಡುತ್ತಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹೆಣ್ಣುಮಕ್ಕಳು ಯಾರೇ ಆಗಲಿ ಮುಂದೆ ಈ ರೀತಿ ನಡೆಯದಂತೆ ನೋಡಿಕೊಳ್ಳಬೇಕು. ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಛೀಮಾರಿ ಹಾಕಬೇಕು. ಇಂಥ ಪ್ರಸಂಗಗಳನ್ನು ಸಿ.ಓ.ಡಿ.ಗೆರೆಫರ್ ಮಾಡಿ ಅವರಿಂದಲೇ ತನಿಖೆಯನ್ನು ಮಾಡಿಸಬೇಕು ಪರಿರಕ್ಷಣೆ ಗೋಸ್ಕರವಾಗಿ ಯಾರು ಮದುವೆಯಾಗುತ್ತಾರೋ ಅಂಥಜನರನ್ನು ಶಿಕ್ಷೆಗೆ ಗುರಿಮಾಡಬೇಕು. ಇಂಥ ಘಟನೆಗಳು ನಡೆದಾಗ ಖಂಡಿತವಾಗಿಯೂ ಸಿ.ಓ.ಡಿ.ಗೆ ಒಪ್ಪಿಸಿ ತನಿಖೆಯನ್ನು ಮಾಡಿಸಿ ತಪ್ಪಿಸ್ತರಿಗೆ ಶಿಕ್ಷೆಯನ್ನು ವಿಧಿಸುವ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆಯೇ ಹೊರತು ಖಂಡನೆ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ ೨೫ನೇ ತಾರೀಖು ಆಕೆಯು ಅರ್ಜಿಯನ್ನು ಕೊಟ್ಟಿರುವುದು ನಿಜ ಮತ್ತೆ ಆದರಲ್ಲಿ ಆಪಾದನೆ ಮಾಡಿದ್ದಾರೆ ಇದು ವಿಷ ಕುಡಿದು ಆತ್ಮಹತ್ಯ ಮಾಡಿಕೊಂಡಿರುವುದಲ್ಲ ಇದು ನಿಗೂಢವಾಗಿರತಕ್ಕಂಥ ಮರಣವಾಗಿದೆ, ಇದನ್ನು ಕೂಲಂಕುಶವಾಗಿ ತನಿಖೆಯಾಗಬೇಕೆಂದು ಅವರು ಬರೆದಿದ್ದಾರೆ. ಅರ್ಜಿ ೨೫ನೇ ತಾರೀಖು ಪೋಲೀಸ್‌ನವರಿಗೆ ರಿಜಿಸ್ಟರ್ ಪೋಸ್ಟ್ ಮಾಡಿರುವುದು ೯-೬-೮೮ ರಂದು ಬಂದಿದೆ. ಅರ್ಜಿಯಲ್ಲಿ ನವೂದಾಗಿದೆ. ಇದರಲ್ಲಿ ಮಾನ್ಯ ಸದಸ್ಯರು ಹೇಳಿದಹಾಗೆ ಸರ್ಕಾರದವರು ತಪ್ಪು ಮಾಡಿದವರನ್ನು ರಕ್ಷಣೆ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯವಿಲ್ಲ ವೆಂದು ನನಗನಿಸುತ್ತದೆ. ತಪ್ಪಿತಸ್ತರು ಯಾರೇ ಇರಲಿ ಅವರನ್ನು ಕಂಡುಹಿಡಿಯಬೇಕಾಗಿದೆ. ಮತ್ತು ಮಾನ್ಯ ಸದಸ್ಯರಿಬ್ಬರು ಸರ್ಕಾರದವರು ಪೋಲೀಸ್‌ನವರ ಮೂಲಕ ತನಿಖೆಮಾಡಿಸಿದರೆ ಬಹುಶಃ ಸತ್ಯ ಹೊರಗೆ ಬರುವುದಕ್ಕೆ ಸಾಧ್ಯವಿಲ್ಲವೆನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ೧೩ನೇ ತಾರೀಖು ಮದುವೆಯಾಗಿದೆ, ೧೭ನೇ ತಾರೀಖು ಆಕೆ ಮೃತಪಟ್ಟಿರುತ್ತಾರೆಂದರೆ ಕರ್ನಾಟಕ ರಾಜ್ಯದಲ್ಲಿ ಎಲ್ಲೇ ಆಗಲಿ ಒಂದು ರೀತಿ ಯಾದ ಅನುಮಾನ ಬರಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಭಾವನೆ ಯನ್ನು ಸರ್ಕಾರದ ಪರವಾಗಿಯೂ ಕೂಡ ವ್ಯಕ್ತಪಡಿಸಿ ಇದನ್ನು ಕೂಲಂಕುಶವಾಗಿ ಸಿ.ಓ.ಡಿ. ಮೂಲಕ ತನಿಖೆ ಮಾಡಿಸಿ ಯಾರೇ ತಪ್ಪಿತಸ್ತರಿರಲಿ ಅವರಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಲು ಆದೇಶಿಸುತ್ತೇನೆ.

ನಿಯಮ ೩೫೪ರ ಮೇರೆಗೆ

(೧) ಸಿದ್ದಾಪುರ ತಾಲ್ಲೂಕಿನ ಕಲ್ಲೂರಿನ ಗ್ರಾಮದ ಸರ್ವೆ ನಂ. ೧೫೯ರಲ್ಲಿ ಸಾಗುವಳಿ ಮಾಡುತ್ತಿದ್ದ ರೈತರನ್ನು ಗೇರು ಬೀಜ ನಿಗಮದವರು ಒಕ್ಕಲಿಂದ ಎಬ್ಬಿಸಲು ಪ್ರಯತ್ನ ನಡೆಸಿರುವ ಬಗ್ಗೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಕಲ್ಲೂರು ಗ್ರಾಮದ ಸರ್ವೆ ನಂ. ೧೫೯ರಲ್ಲಿ ೮ ಜನ ರೈತರು ಸುಮಾರು ೪ ಎಕರೆ ಜಮೀನಿನಲ್ಲಿ ೫ಳಿದ ೩೦ ವರ್ಷಗಳಿಂದಲೂ ಅತಿಕ್ರಮ ಸಾಗುವಳಿ ಮಾಡುತ್ತಿದ್ದಾರೆ. ಈಗಾಗಲೇ ಸರ್ಕಾರದವರು ಇಂತಹ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಂದರ್ಭದಲ್ಲಿ ಗೇರುಬೀಜ ನಿಗಮದವರು ಸದರಿ ರೈತರನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದ್ದು, ಇದರಿಂದ ರೈತರಿಗೆ ತೊಂದರೆಯಾಗುವುದರಿಂದ ಇದನ್ನು ತಡೆಗಟ್ಟುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಉತ್ತರವನ್ನು ತರಿಸಿ ನಂತರ ಕೊಡಲಾಗುತ್ತದೆ.

(೨) ರಾಜ್ಯದ ಮೀಸಲು ಪೋಲೀಸ್ ಪಡೆಗೆ ೧೩ ಹುದ್ದೆಗೆ ಸಂದರ್ಶನ ನಡೆದಿದ್ದು ಆಯ್ಕೆಯಾದ ಅಭ್ಯರ್ಥಿಗಳನ್ನು ಸೇವೆಯಿಂದ ವಜಾ ಮಾಡಿರುವುದು.

ಶ್ರೀ ಬಿ. ಲಕ್ಕಪ್ಪ.—ಕರ್ನಾಟಕ ರಾಜ್ಯ ಮೀಸಲು ಪೋಲೀಸ್ ೧ನೇ ಪಡೆ ಬೆಂಗಳೂರಿನಲ್ಲಿ ೮೮-೮೯ನೇ ಸಾಲಿನಲ್ಲಿ ೩೦ ಪೇದೆ ಮತ್ತು ೧೩ ಅನುಯಾಯಿಗಳ ಹುದ್ದೆಗೆ ಸಂದರ್ಶನ ನಡೆದಿದ್ದು,